## ಪ್ರಮುಖ ಕಸಿಗಳ ವೆಚ್ಚ

**₹3 ಲಕ್ಷ** (ಕಸಿ ವೆಚ್ಚ + ಇಮ್ಯುನೊಸಪ್ರೆಶನ್)
ಮೂತ್ರಪಿಂಡ ಕಸಿ

**₹12 ಲಕ್ಷ**
ಯಕೃತ್ ಕಸಿ

**₹11 ಲಕ್ಷ**
ಹೃದಯ ಕಸಿ

**₹16 ಲಕ್ಷ**
ಶ್ವಾಸಕೋಶ ಕಸಿ

**₹23.5 ಲಕ್ಷ**
ಹೃದಯ ಮತ್ತು ಶ್ವಾಸಕೋಶ ಕಸಿ

## ಸರ್ಕಾರಿ ಆಸ್ಪತ್ರೆಗಳ ಕಸಿ ಸೇವೆಗಳು

1. ನೆಫ್ರೋಯುರಾಲಜಿ ಸಂಸ್ಥೆ, ಬೆಂಗಳೂರು – ಮೂತ್ರಪಿಂಡ ಕಸಿ
2. ಕಿಮ್ಸ್, ಹುಬ್ಬಳ್ಳಿ – ಮೂತ್ರಪಿಂಡ ಕಸಿ
3. ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆ, ಬೆಂಗಳೂರು – ಹೃದಯ ಕಸಿ
4. ಗ್ಯಾಸ್ಟ್ರೋ ಎಂಟರಾಲಜಿ ವಿಜ್ಞಾನ ಮತ್ತು ಅಂಗಾಂಗ ಕಸಿ ಸಂಸ್ಥೆ(ಐಜಿಒಟಿ) ಬೆಂಗಳೂರು – ಯಕೃತ್ ಕಸಿ ಮತ್ತು ಮೂತ್ರಪಿಂಡ.
5. ಕಮಾಂಡ್ ಆಸ್ಪತ್ರೆ–ಕಿಡ್ನಿ




ಸೇರಿದಂತೆ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜು, ಜಿಲ್ಲಾಸ್ಪತ್ರೆಗಳಲ್ಲಿ ಅಂಗಾಂಗ ದಾನಗಳ ನಿರ್ವಹಣೆ ಮತ್ತು ಸೂಕ್ತ ಸಮಯಕ್ಕೆ ಸ್ಪಂದಿಸುವ ಸದುದ್ದೇಶದಿಂದ ನಾನ್ ಟ್ರಾನ್ಸ್‌ಪ್ಲಾಂಟ್ ರಿಟ್ರೀವಲ್ ಸೆಂಟರ್(ಎನ್‌ಟಿಒಆರ್‌ಸಿ) ಘಟಕಗಳನ್ನು ಸ್ಥಾಪನೆ ಮಾಡಲಾಗಿದೆ. ಈ ಕೇಂದ್ರಗಳಲ್ಲಿ ಮಿದುಳು ನಿಷ್ಕ್ರಿಯಗೊಂಡ ದಾನಿಗಳಿಂದ ಅಂಗಾಂಗಗಳನ್ನು ಪಡೆದು ರಾಜ್ಯದ ನಾನಾ ಭಾಗಗಳಲ್ಲಿರುವ ಕಸಿ ಕೇಂದ್ರಗಳಿಗೆ ಗ್ರೀನ್ ಕಾರಿಡಾರ್ ಮೂಲಕ ತ್ವರಿತವಾಗಿ ತಲುಪಿಸುವ ವ್ಯವಸ್ಥೆ ಮಾಡಲಾಗುತ್ತದೆ. ಇದರೊಂದಿಗೆ ರಾಜ್ಯದ ಜಿಲ್ಲಾಸ್ಪತ್ರೆಗಳಲ್ಲೂ ಸಹ ಎನ್‌ಟಿಒಆರ್‌ಸಿಗಳನ್ನು ಸ್ಥಾಪಿಸಲಾಗಿದೆ. ಮಂಗಳೂರಿನ ವೆನ್‌ಲಾಕ್ ಜಿಲ್ಲಾಸ್ಪತ್ರೆಯಲ್ಲಿ ಸ್ಥಾಪಿಸಲಾಗಿರುವ ಎನ್‌ಟಿಒಆರ್‌ಸಿ ಘಟಕದಲ್ಲಿ ಪ್ರಸಕ್ತ ವರ್ಷ ಒಂದು ಅಂಗದಾನ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಮಾಡಲಾಗಿದೆ. ಇದೇ ರೀತಿ ಪ್ರತಿಯೊಂದು ಪ್ರತಿಯೊಂದು ಜಿಲ್ಲಾಸ್ಪತ್ರೆಗಳಲ್ಲಿ ಮಿದುಳು ನಿಷ್ಕ್ರಿಯಗೊಂಡ ರೋಗಿಗಳನ್ನು ಗುರುತಿಸಿ ಘೋಷಿಸಲೆಂದು ಬ್ರೈನ್ ಡೆತ್ ಡಿಕ್ಲರೇಶನ್ ಕಮಿಟಿಗಳನ್ನು ಸ್ಥಾಪಿಸಲಾಗಿದೆ. ಈ ಸಮಿತಿಗಳು ಮಿದುಳು ನಿಷ್ಕ್ರಿಯಗೊಂಡ ರೋಗಿಗಳನ್ನು ಗುರುತಿಸಿ, ಸೂಕ್ತ ಸಮಯಕ್ಕೆ ಮಾಹಿತಿ ರವಾನಿಸುವ ಮೂಲಕ ಅಂಗಾಂಗಗಳ ನಿರೀಕ್ಷೆಯಲ್ಲಿರುವ ವ್ಯಕ್ತಿಗಳ ಬದುಕಿಗೆ ಬೆಳಕಾಗುತ್ತಿದೆ.

### ಬಿಪಿಎಲ್ ಕಾರ್ಡುದಾರರಿಗೆ ಸೌಕರ್ಯ!

ರಾಜ್ಯದಲ್ಲಿ ಅಂಗಾಂಗ ಕಸಿ ಎನ್ನುವುದು ಆರ್ಥಿಕವಾಗಿ ಹಿಂದುಳಿದವರ ಕೈಗೆಟುಕುವಂತಿರಬೇಕೆನ್ನುವ ಸರ್ಕಾರದ ಸದುದ್ದೇಶದಿಂದಾಗಿ ಬಡವರಿಗೆ ಉಚಿತವಾಗಿ ಈ ಸೌಕರ್ಯ ಸಿಗುವಂತೆ ಮಾಡಲಾಗಿದೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್(ಎಸ್‌ಎಎಸ್‌ಟಿ) ಅಡಿಯಲ್ಲಿ ಮೂತ್ರಪಿಂಡ, ಹೃದಯ, ಯಕೃತ್ ಮತ್ತು ಬಹು ಅಂಗಾಂಗ ಕಸಿಗೆ ಬಿಪಿಎಲ್ ಕಾರ್ಡ್ ಹೊಂದಿರುವ ರೋಗಿಗಳಿಗೆ ಉಚಿತ ಪ್ಯಾಕೇಜ್ ದರ ನಿಗದಿಪಡಿಸಲಾಗಿದೆ. ಈ ಯೋಜನೆಯಡಿ ಬಡವರಿಗೆ ಲಕ್ಷಾಂತರ ರೂ. ಖರ್ಚಾಗುವ ಕೆಲವೊಂದು ಕಸಿಗಳು ಉಚಿತವಾಗಿ ಸಿಗುತ್ತಿವೆ. ಸಾಮಾನ್ಯವಾಗಿ ಮೂತ್ರಪಿಂಡ ಕಸಿಗೆ 3ಲಕ್ಷ (ಕಸಿ ವೆಚ್ಚ + ಇಮ್ಯುನೊಸಪ್ರೆಶನ್), ಯಕೃತ್ ಕಸಿಗೆ 12 ಲಕ್ಷ, ಹೃದಯ ಕಸಿಗೆ 11ಲಕ್ಷ, ಶ್ವಾಸಕೋಶ ಕಸಿಗೆ 16 ಲಕ್ಷ, ಹೃದಯ ಮತ್ತು ಶ್ವಾಸಕೋಶ ಕಸಿಗೆ 23.5ಲಕ್ಷ ರೂ. ಖರ್ಚಾಗುತ್ತದೆ. ಈ ಸೌಕರ್ಯಗಳನ್ನು ಸರ್ಕಾರದ ಯೋಜನೆಯ ಭಾಗವಾಗಿ ಉಚಿತವಾಗಿ ನೀಡಲಾಗುತ್ತಿದೆ. ಈ ಪೈಕಿ ಕೆಲವೊಂದು ಕಸಿಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿದ್ದು, ಬೆಂಗಳೂರಿನ ನೆಫ್ರೋಯುರಾಲಜಿ ಸಂಸ್ಥೆಯಲ್ಲಿ ಮೂತ್ರಪಿಂಡ ಕಸಿ, ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಮೂತ್ರಪಿಂಡ ಕಸಿ, ಬೆಂಗಳೂರಿನ ಶ್ರೀಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಹೃದಯ ಕಸಿ, ಬೆಂಗಳೂರಿನ ಗ್ಯಾಸ್ಟ್ರೋ ಎಂಟರಾಲಜಿ ವಿಜ್ಞಾನ ಮತ್ತು ಅಂಗಾಂಗ ಕಸಿ ಸಂಸ್ಥೆ(ಐಜಿಒಟಿ)ಯಲ್ಲಿ ಯಕೃತ್ ಕಸಿ ಮಾಡುವ ವ್ಯವಸ್ಥೆಯಿದೆ.

## ಜೀವಸಾರ್ಥಕತೆಯ ಉದ್ದೇಶಗಳು

- ಮೆದುಳು ನಿಷ್ಕ್ರಿಯ ಸಾವು ಪ್ರಕರಣಗಳಲ್ಲಿ ಅಂಗದಾನದ ಬಗ್ಗೆ ಜನಜಾಗೃತಿ ಮೂಡಿಸುವುದು.
- ಅಂಗದಾನಕ್ಕೆ ಸಂಬಂಧಿಸಿದ ಮೂಢನಂಬಿಕೆಗಳನ್ನು ನಿವಾರಿಸುವುದು.
- ಅಂಗಾಂಗ ಕಸಿಗೆ ಸಂಬಂಧಿಸಿದ ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಗಟ್ಟುವುದು.
- ಮೆದುಳು ನಿಷ್ಕ್ರಿಯ ಸಾವು ಗುರುತಿಸುವಿಕೆ ಮತ್ತು ಎನ್‌ಟಿಒಆರ್‌ಸಿ ಸ್ಥಾಪನೆಗೆ ತರಬೇತಿ ಕಾರ್ಯಕ್ರಮ.
- ಆರೋಗ್ಯಕರ ಜೀವನ ಶೈಲಿಯನ್ನು ಉತ್ತೇಜಿಸುವ ಮೂಲಕ ಅಂಗಾಂಗ ಕಸಿಗೆ ಇರುವ ಬೇಡಿಕೆಯನ್ನು ಕಡಿಮೆ ಮಾಡಲು ಕ್ರಮ.

